# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1262
ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಸಿಂಹ ನಾಯಕ್
(ವಿಧಾನ ಸಭೆಯಿಂದ ಚುನಾಯಿತರಾದವರು
ಉತ್ತರಿಸುವ ದಿನಾಂಕ : 22-08-2025
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಕೃಷಿ ಯಂತ್ರಧಾರೆ" ಮಹತ್ವಾಕಾಂಕ್ಷಿ ಯೋಜನೆಗೆ ಸೂಕ್ತ ಅನುದಾನದ ಕೊರತೆಯಿಂದಾಗಿ ಗ್ರಹಣ ಹಿಡಿದಿರುವುದರಿಂದ ರೈತರಿಗೆ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | "ಕೃಷಿ ಯಂತ್ರಧಾರೆ" ಕೇಂದ್ರಗಳು ಹಲವು ಕಡೆ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ರಾಜ್ಯದಲ್ಲಿ ಒಟ್ಟು 697 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಪ್ರಸ್ತುತ 151 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ 546 ಕೇಂದ್ರಗಳು ಸ್ಥಗಿತಗೊಂಡಿವೆ. ಜಿಲ್ಲಾವಾರು ವಿವರ ಅನುಭಂದದಲ್ಲಿ ಒದಗಿಸಲಾಗಿದೆ. |
| ಆ) | ಬಂದಿದ್ದಲ್ಲಿ, ರಾಜ್ಯದಲ್ಲಿ ಒಟ್ಟು ಎಷ್ಟು ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು; ಪ್ರಸ್ತುತ, ಎಷ್ಟು ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಎಷ್ಟು ಕೇಂದ್ರಗಳು ಸ್ಥಗಿತಗೊಂಡಿವೆ; (ಜಿಲ್ಲಾವಾರು ವಿವರ ನೀಡುವುದು) | |
| ಇ) | ಬಹುತೇಕ ಕೃಷಿ ಯಂತ್ರಧಾರೆ ಕೇಂದ್ರಗಳು ಈ ರೀತಿ ಅಕಾಲಿಕವಾಗಿ ಸ್ಥಗಿತಗೊಳ್ಳಲು ಕಾರಣಗಳೇನು; | 1. ಕೃಷಿ ಯಂತ್ರಧಾರೆ ಯೋಜನೆಯಡಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ನಡೆಸಲು ಸೇವಾದಾರ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಪ್ಪಂದದ ಅವಧಿ ಮೊದಲಿಗೆ 6 ವರ್ಷದ ಹಾಗೂ ಮತ್ತೆ 3 ವರ್ಷ ವಿಸ್ತರಿಸಲಾಗಿದ್ದು ಒಟ್ಟು 9 ವರ್ಷ ಅವಧಿಯು ಮುಗಿದಿದ್ದು, ಬಹುತೇಕ ನೊಂದಾಯಿತ ಸೇವಾಧಾರ ಸಂಸ್ಥೆಗಳು ಕೃಷಿ ಯಂತ್ರಧಾರೆ ಕೇಂದ್ರಗಳ ಸೇವೆಯನ್ನು ಮುಂದುವರಿಸಲು ಇಚ್ಛಿಸಿರುವುದಿಲ್ಲ.<br>2. ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿರುವ ಕೃಷಿ ಯಂತ್ರೋಪಕರಣಗಳು 7 ವರ್ಷಕ್ಕೂ ಹಳೆಯದಾಗಿದ್ದೂ, ಹೆಚ್ಚಿನ ಯಂತ್ರೋಪಕರಣಗಳು ದುರಸ್ತಿಯನ್ನು ಮಾಡಿಸಲು ಸಾಧ್ಯವಾಗದೇ ಅನುಪಯುಕ್ತವಾಗಿರುತ್ತವೆ. ಹಾಗೆ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿರುವ ಕೃಷಿ ಯಂತ್ರೋಪಕರಣಗಳು ಹಳೆಯ ಮಾದರಿಗಳಾಗಿದ್ದು, ಈಗ ರೈತರು ನವೀಕೃತ, ನೂತನ ಹೈಟೆಕ್ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಉಪಯೋಗಿಸಲು ಆಸಕ್ತಿ |

| | | |
|---|---|---|
| | | ತೋರಿಸುತ್ತಿರುವುದರಿಂದ ಕೃಷಿ ಯಂತ್ರಧಾರೆ ಕೇಂದ್ರದಲ್ಲಿರುವ ಸುಸಜ್ಜಿತವಾದ ಕೃಷಿ ಯಂತ್ರೋಪಕರಣಗಳಿಗೂ ಸಹ ಬೇಡಿಕೆ ಇಲ್ಲದಾಗಿದ್ದು ಕೃಷಿ ಯಂತ್ರಧಾರೆ ಕೇಂದ್ರಗಳು ನಷ್ಟ ಅನುಭವಿಸುವಂತಾಗಿರುತ್ತದೆ.<br>3. ಹೆಚ್ಚಿನ ಸೇವಾದಾರ ಸಂಸ್ಥೆಗಳು, ಒಡಂಬಡಿಕೆ ಅವಧಿಯ ನಂತರ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಮುಂದುವರೆಸಲು ಇಚ್ಛಿಸದೇಯಿರುವುದರಿಂದ, ಸದರಿ ಕೇಂದ್ರಗಳನ್ನು ಆಸಕ್ತಿಯುಳ್ಳ ರೈತ ಉತ್ಪಾದಕ ಸಂಸ್ಥೆಗಳಿಗೆ/ ಗ್ರಾಮೀಣ ಜೀವನಾಧಾರ ಅಭಿಯಾನ (National Rural Livelihoods Mission-NRLM) ಸಂಘಗಳಿಗೆ ಅಥವಾ ಇತರೇ ಆಸಕ್ತಿಯುಳ್ಳ ಸಂಘ ಸಂಸ್ಥೆಗಳಿಗೆ ಸದರಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಹಸ್ತಾಂತರಿಸಲು ಕ್ರಮಕೈಗೊಳ್ಳಲಾಗಿತ್ತು. ಆದರೆ, ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಪಡೆಯಲು / ಹಸ್ತಾಂತರಿಸಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಸಂಘ ಸಂಸ್ಥೆಗಳು ಅಸಕ್ತಿತೋರಿ ಮುಂದೆ ಬರುತ್ತಿಲ್ಲದಿರುವುದು ಕಂಡು ಬಂದಿದೆ.<br>4. ಕಳೆದ 10 ವರ್ಷಗಳಲ್ಲಿ ಕೃಷಿ ಇಲಾಖೆಯ ಮುಖಾಂತರ ರಾಜ್ಯದಲ್ಲಿ ರೈತರಿಗೆ ವ್ಯಾಪಕವಾಗಿ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಡಿ ವಿತರಿಸಲಾಗಿರುತ್ತದೆ ಹಾಗೂ ರಾಜ್ಯದ ಹಲವಾರು ರೈತರುಗಳು ಸಹಾಯಧನ ಪಡೆಯದೇ ಪೂರ್ಣ ಪ್ರಮಾಣ ಮೊತ್ತವನ್ನು ಪಾವತಿಸಿ ಮಾರುಕಟ್ಟೆಯಲ್ಲಿ ಲಭ್ಯವಿರುವ ನೂತನ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಿದ್ದು, ಪಡೆದಿರುವ ಕೃಷಿ ಯಂತ್ರೋಪಕರಣಗಳನ್ನು ಸ್ವಂತಕ್ಕೆ ಉಪಯೋಗಿಸುವುದಲ್ಲದೆ ತಮ್ಮ ಸುತ್ತ ಮುತ್ತಲಿನ ರೈತರುಗಳಿಗೆ ಬಾಡಿಗೆಗೆ ನೀಡುತ್ತಿರುತ್ತಾರೆ. ಇದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಬಾಡಿಗೆ ಆಧಾರದ ಮೇಲೆ ರೈತರಲ್ಲಿರುವ ಕೃಷಿ ಯಂತ್ರೋಪಕರಣಗಳು ಲಭ್ಯತೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿರುತ್ತದೆ.<br>5. ಕೃಷಿ ಯಂತ್ರಧಾರೆ ಯೋಜನೆಯನ್ನು ಆರಂಭಿಸಿದ 2014-15ನೇ ಸಾಲಿನಲ್ಲಿರುವಂತಹ ಪರಿಸ್ಥಿತಿಗಿಂತಲೂ ಪ್ರಸ್ತುತ ಕೃಷಿ ಸನ್ನಿವೇಶಗಳು ಭಿನ್ನವಾಗಿರುವುದರಿಂದ ಹಾಗೂ ರೈತರ ಬೇಡಿಕೆ ಬದಲಾಗಿರುವುದರಿಂದ ಕೃಷಿ ಯಂತ್ರಧಾರೆ ಯೋಜನೆ ಕೃಷಿ ಯಂತ್ರಧಾರೆ ಕೇಂದ್ರಗಳು ಪರಿಣಾಮಕಾರಿಯಾಗಿ ರೈತರಿಗೆ ಸೇವೆ ಒದಗಿಸಲು ಹಾಗೂ ಸುಸ್ಥಿರವಾಗಿ ಕಾರ್ಯನಿರ್ವಹಿಸಲು ಕಷ್ಟಸಾಧ್ಯವಾಗಿರುತ್ತದೆ ಹಾಗೂ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವುದರಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳು ರೈತರೊಂದಿಗೆ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಲು ಸಹ ಕಷ್ಟಸಾಧ್ಯವಾಗಿರುತ್ತದೆ. |

| | | |
|---|---|---|
| ಈ) | ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಕಡಿಮೆ ಬಾಡಿಗೆಯಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುತ್ತಿದ್ದ ಈ ಕೇಂದ್ರಗಳು ಸ್ಥಗಿತಗೊಂಡು ಆ ರೈತರಿಗೆ ತೊಂದರೆಯಾಗಿರುವುದನ್ನು ತಪ್ಪಿಸಲು ಸರ್ಕಾರ ಸಕಾಲದಲ್ಲಿ ಏಕೆ ಯಾವುದೇ ಕ್ರಮವಹಿಸಲಿಲ್ಲ. | 1. ರೈತರು ಖರೀದಿಸಿ ನಿರ್ವಹಿಸಲು ಕಷ್ಟಸಾಧ್ಯವಿರುವ ದೊಡ್ಡ ನೂತನ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಒದಗಿಸಲು ಸರ್ಕಾರವು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು 2023-24ನೇ ಸಾಲಿನಿಂದ ಪ್ರಾರಂಭಿಸಲಾಗಿರುತ್ತದೆ. ವೈಯುಕ್ತಿಕ ರೈತರು, ರೈತ ಉತ್ಪಾದಕ ಸಂಸ್ಥೆಗಳಿಗೆ/ ಗ್ರಾಮೀಣ ಜೀವನಾಧಾರ ಅಭಿಯಾನ (National Rural Livelihoods Mission-NRLM) ಸಂಘಗಳಿಗೆ ಅಥವಾ ಇತರೇ ಆಸಕ್ತಿಯುಳ್ಳ ಸಂಘ ಸಂಸ್ಥೆಗಳಿಗೆ ಸಹಾಯಧನವನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳು ಒಂದು ಜಿಲ್ಲೆಗೆ ಸೀಮಿತವಾಗದೆ ಕಾರಿಡಾರ್ ಮಾದರಿಯಲ್ಲಿ ಅಕ್ಕ ಪಕ್ಕದ ಜಿಲ್ಲೆಗಳಲ್ಲಿಯೂ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ. ಇಲ್ಲಿಯವರೆಗೆ 340 ಹೈಟೆಕ್ ಹಾರ್ವೆಸ್ಟರ್ ಹಬ್‌ಗಳಿಗೆ ಸಹಾಯಧನವನ್ನು ಒದಗಿಸಲಾಗಿರುತ್ತದೆ.<br>2. ಕಳೆದ 8-10 ವರ್ಷಗಳಿಂದ ರಾಜ್ಯದಲ್ಲಿ ಟ್ರ್ಯಾಕ್ಟರ್‌ಗಳು ಅತೀ ಹೆಚ್ಚು ಮಾರಾಟವಾಗುತ್ತಿದ್ದು ಅದಕ್ಕೆ ಅನುಗುಣವಾಗಿ ಕೃಷಿ ಯಂತ್ರೋಪಕರಣಗಳನ್ನು ರೈತರು ಪಡೆಯುತ್ತಿದ್ದಾರೆ. ಪ್ರತಿಯೊಬ್ಬ ಟ್ರ್ಯಾಕ್ಟರ್ ಹೊಂದಿರುವ ರೈತರು ಕೃಷಿ ಯಂತ್ರಧಾರೆ ಕೇಂದ್ರದ ಕಾರ್ಯ ಅಂದರೆ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ. ಆದ್ದರಿಂದ ಟ್ರ್ಯಾಕ್ಟರ್ ಹೊಂದಿರುವ ರೈತರಿಗೆ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ನೀಡಲಾಗುತ್ತಿದೆ. |
| ಉ) | ಸ್ಥಗಿತಗೊಂಡಿರುವ ಈ ಎಲ್ಲಾ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಪುನಾರಂಭಗೊಳಿಸುವುದರ ಜೊತೆಗೆ ಬೇಡಿಕೆಗನುಗುಣವಾಗಿ ಹೊಸ ಕೇಂದ್ರಗಳನ್ನು ತೆರೆಯಲು ಸರ್ಕಾರ ಅಗತ್ಯ ಕ್ರಮವಹಿಸುವುದೇ? | ಪ್ರಸ್ತುತ ಸನ್ನಿವೇಶದಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸಮರ್ಪಕವಾಗಿ ಕಾರ್ಯನಿರ್ವಹಿಸುವುದು ಕಷ್ಟ ಸಾಧ್ಯವಿರುವುದರಿಂದ, ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಪುನಾರಂಭಗೊಳಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದಾಗ್ಯೂ ಕೃಷಿ ಯಂತ್ರೋಪಕರಣಗಳ ಬೇಡಿಕೆಯನ್ನು ಪೂರೈಸಲು ಪ್ರತಿಯೊಬ್ಬ ಟ್ರ್ಯಾಕ್ಟರ್ ಹೊಂದಿರುವ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನ ಒದಗಿಸಿ ನೀಡಲಾಗುತ್ತಿದೆ. ಇದರೊಂದಿಗೆ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಲ್ಲೂ ಸಹ ಕೃಷಿ ಯಂತ್ರೋಪಕರಣಗಳನ್ನು ಬೇಡಿಕೆಯನುಸಾರ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ. |

**ಸಂಖ್ಯೆ:AGRI/119/ASC/2025**

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು.**

**ಅನುಬಂಧ - LCQ 1262**

**ಜಿಲ್ಲಾವಾರು ಕೃಷಿ ಯಂತ್ರಧಾರೆ ಕೇಂದ್ರಗಳ ವಿವರಗಳು (ಸಂಖ್ಯೆಗಳಲ್ಲಿ)**

| ಕ್ರ. ಸಂ. | ಜಿಲ್ಲೆ | ಸ್ಥಾಪಿಸಲಾಗಿರುವ ಒಟ್ಟು ಕೇಂದ್ರಗಳು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳು | ಸ್ಥಗಿತಗೊಂಡಿರುವ ಕೇಂದ್ರಗಳು |
|---|---|---|---|---|
| 1 | ಬಾಗಲಕೋಟೆ | 18 | 2 | 16 |
| 2 | ಬೆಂಗಳೂರು | 28 | 2 | 26 |
| 3 | ಬೆಳಗಾವಿ | 33 | 13 | 20 |
| 4 | ಬಳ್ಳಾರಿ | 13 | 2 | 11 |
| 5 | ಬೀದರ್ | 30 | 0 | 30 |
| 6 | ಚಾಮರಾಜನಗರ | 16 | 3 | 13 |
| 7 | ಚಿಕ್ಕಬಳ್ಳಾಪುರ | 26 | 5 | 21 |
| 8 | ಚಿಕ್ಕಮಗಳೂರು | 30 | 13 | 17 |
| 9 | ಚಿತ್ರದುರ್ಗ | 22 | 4 | 18 |
| 10 | ದಕ್ಷಿಣ ಕನ್ನಡ | 16 | 5 | 11 |
| 11 | ದಾವಣಗೆರೆ | 20 | 4 | 16 |
| 12 | ಧಾರವಾಡ | 14 | 1 | 13 |
| 13 | ಗದಗ | 11 | 5 | 6 |
| 14 | ಹಾಸನ | 38 | 4 | 34 |
| 15 | ಹಾವೇರಿ | 19 | 5 | 14 |
| 16 | ಕಲಬುರಗಿ | 32 | 28 | 4 |
| 17 | ಕೊಡಗು | 16 | 3 | 13 |
| 18 | ಕೋಲಾರ | 27 | 6 | 21 |
| 19 | ಕೊಪ್ಪಳ | 20 | 1 | 19 |
| 20 | ಮಂಡ್ಯ | 31 | 7 | 24 |
| 21 | ಮೈಸೂರು | 33 | 3 | 30 |
| 22 | ರಾಯಚೂರು | 37 | 4 | 33 |
| 23 | ಬೆಂಗಳೂರು ದಕ್ಷಿಣ (ರಾಮನಗರ) | 10 | 2 | 8 |
| 24 | ಶಿವಮೊಗ್ಗ | 31 | 5 | 26 |
| 25 | ತುಮಕೂರು | 50 | 10 | 40 |
| 26 | ಉಡುಪಿ | 9 | 5 | 4 |
| 27 | ಉತ್ತರ ಕನ್ನಡ | 15 | 4 | 11 |
| 28 | ವಿಜಯನಗರ | 18 | 2 | 16 |
| 29 | ವಿಜಯಪುರ | 18 | 0 | 18 |
| 30 | ಯಾದಗಿರಿ | 16 | 3 | 13 |
| | **ಒಟ್ಟು** | **697** | **151** | **546** |

ಜಂಟಿ ಕೃಷಿ ನಿರ್ದೇಶಕರು
(ಕೃಷಿ ಯಾಂತ್ರೀಕರಣ & ಸೂಕ್ಷ್ಮ ನೀರಾವರಿ)